## ದಿನಾಂಕ 01-10-2022 ರಂದು ಬೆಳಗ್ಗೆ 12.30 ಗಂಟೆಗೆ ವಾರ್ಡ್-124 ರ ಕೋಡಿಹಳ್ಳಿ ಸರ್ಕಾರಿ ಶಾಲೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಗಳು

ವಾರ್ಡ್ ಸಂಖ್ಯೆ-124 ಜೀವನ್‌ಭೀಮಾನಗರದ ಕೋಡಿಹಳ್ಳಿ ಸರ್ಕಾರಿ ಶಾಲೆಯಲ್ಲಿ ದಿನಾಂಕ: 01-10-2022 ರಂದು ಬೆಳಿಗ್ಗೆ 12.30 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ.

**ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು**

1. ಶ್ರೀ.ಸಾವಿತ್ರಿ –ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-88.
2. ಶ್ರೀಮತಿ ಶಿಲ್ಪಶ್ರೀ – ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ.
3. ಶ್ರೀ.ಶ್ರೀನಿವಾಸಲು – ಹಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ.ಹನುಮಂತಪ್ಪ – ಕಿರಿಯ ಘನತ್ಯಾಜ್ಯ ಪರಿವೀಕ್ಷಕರು
5. ಶ್ರೀ.ಲೋಹಿತ್ – ಎಇ. ಬಿಡಬ್ಲ್ಯೂಎಸ್‌ಎಸ್‌ಬಿ
6. ಶ್ರೀಮತಿ.ಮಮತಾ – ಎಇ. ಬಿಡಬ್ಲ್ಯೂಎಸ್‌ಎಸ್‌ಬಿ
7. ಶ್ರೀ.ಸತೀಶ್ – ಎಎಸ್‌ಐ. ಜೆಬಿಎನ್ ಪೋಲೀಸ್ ಠಾಣೆ
8. ಶ್ರೀ.ಚಂದ್ರಶೇಖರ್ – ಯುಎಫ್‌ಡಬ್ಲೂ ವತಿ ಕಂಟ್ರಾಕ್ಟರ್
9. ಶ್ರೀ.ಲಾಲ್ ಸಾಹೇಬ್ – ಮಾರ್ಷಲ್, ಬಿಬಿಎಂಪಿ
10. ಶ್ರೀ.ಚಂದ್ರ – ಸದಸ್ಯರು
11. ಶ್ರೀ.ಪಾಲ್ ಅಮಲ್‌ರಾಜ್ – ಸದಸ್ಯರು
12. ಶ್ರೀ.ಸದಾಶಿವನ್ – ಸದಸ್ಯರು
13. ಶ್ರೀ.ನವೀನ್ – ಸದಸ್ಯರು

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀಮತಿ ಶಿಲ್ಪಶ್ರೀ ರವರು ಸಭೆಗೆ ಆಗಮಿಸಿದ್ದ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ಹಿಂದಿನ ಸಭೆಯ ನಡವಳಿಗಳನ್ನು ಓದಿ ತಿಳಿಸಿದರು. ಹಾಗೂ ಇಂದಿನ ಸಭೆಯ ಅಜೆಂಡಾ ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ಕೋರಿದರು.

- ಮಳೆಗಾಲವಾದುದರಿಂದ ಸೊಳ್ಳೆಗಳ ಸಂಖ್ಯೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ವಾರ್ಡ್‌ನಲ್ಲಿ ಸೊಳ್ಳೆ ಔಷಧ ಸಿಂಪಡಿಸಲು ಶ್ರೀಮತಿ.ಚಿತ್ರರವರು ತಿಳಿಸಿದರು. ಇದಕ್ಕೆ ಹಿರಿಯ ಆರೋಗ್ಯ ಪರಿವೀಕ್ಷಕರು Mosquito fogging ಮಾಡಿಸಿ ಕೊಡಲಾಗುವುದು ಎಂದು ತಿಳಿಸಿದರು.

- 14ನೇ, 19ನೇ ಮುಖ್ಯರಸ್ತೆಯಲ್ಲಿ ಸ್ಯಾನಿಟರಿ ಲೈನ್ ಬದಲಾಯಿಸಬೇಕೆಂದು ಸಭೆಯಲ್ಲಿ ಹಾಜರಿದ್ದ ಶ್ರೀ.ಚಂದ್ರುರವರು ತಿಳಿಸಿದರು. ಇದಕ್ಕೆ ಸಂಬಂಧಪಟ್ಟ ಬಿ.ಡ.ಬ್ಲ್ಯೂ.ಎಸ್.ಎಸ್.ಬಿ ಅಭಿಯಂತರರು ರವರು ಸೂಕ್ತ ರೀತಿಯ ಬದಲಾವಣೆಯನ್ನು ಕೈಗೊಳ್ಳಲಾಗುವುದೆಂದು ತಿಳಿಸಿದರು.

- ಘನತ್ಯಾಜ್ಯ ಇಲಾಖೆಯಲ್ಲಿ ವಾರ್ಡ್-124 ರ ಕಸ ವಿಂಗಡಣೆಯು 55%ರಷ್ಟು ಆಗುತ್ತಿದ್ದು, ಆಟೋಟಿಪ್ಪರ್/ಕಾಂಪ್ಯಾಕ್ಟರ್‌ಗಳು ಪ್ರತಿ ದಿನದ ಹಾಜರಾತಿ ಮತ್ತು ಆರ್.ಎಫ್.ಐ.ಡಿ ಹಾಗೂ ಜಿ.ಪಿ.ಎಸ್ ಪ್ರತಿ ಆಟೋಗಳಿಗೆ ಅಳವಡಿಸಲಾಗಿದೆ ಎಮದು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿದರು.

- ಆನಂದಪುರ ಸ್ಲಂನಲ್ಲಿರುವ ಚರಂಡಿ ಮೋರಿಗಳನ್ನು ಡೀಸಿಲ್ಟ್ ಮಾಡಿಕೊಡಲು ಸಭೆಯಲ್ಲಿ ಹಾಜರಿದ್ದ ಶ್ರೀ.ಜಾನ್‌ಪಾಲ್ ರವರು ಕೋರಿರರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಮುಂದಿನ ಅಮೃತ ನಗರೋತ್ಥಾನದ ಅನುದಾನದ ಯೋಜನೆಯಡಿಯಲ್ಲಿ ಕಾಂಗಾರಿಯನ್ನು ಕೈಗೊಳ್ಳಲಾಗುವುದು ಎಂದು ವಾರ್ಡ್ ಅಭಿಯಂತರರು ತಿಳಿಸಿದರು.

- ಇತ್ತೀಚೆಗೆ ಬಿದ್ದ ಭಾರಿ ಮಳೆಯಿಂದಾಗಿ ಬಿದ್ದ ರಸ್ತೆ ಗುಂಡಿಗಳನ್ನು ಮುಚ್ಚಲು ವಾರ್ಡ್ ಸಮಿತಿ ಸಭೆಯಲ್ಲಿ ಕೋರಿದರು. ಇದಕ್ಕೆ ವಾರ್ಡ್‌ನ ಅಭಿಯಂತರರು. ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

- ವಾರ್ಡ್ ವ್ಯಾಪ್ತಿಯಲ್ಲಿ ಸಿಲ್ಟ್ & ಟ್ರಾಕ್ಟರ್ ಮೂಲಕ ಡೆಬ್ರೀಸ್‌ನ್ನು ತೆಗೆಯಲು ಸಮಿತಿ ಸದಸ್ಯರು ಕೋರಿದರು. ಇದಕ್ಕೆ ವಾರ್ಡ್‌ನ ಅಭಿಯಂತರರು. ಡೆಬ್ರೀಸ್ ತೆಗೆಯುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

3/10/22

ಕಾರ್ಯದರ್ಶಿಗಳು
ವಾರ್ಡ್ ಸಮಿತಿ-124

ಅಧ್ಯಕ್ಷರು
ವಾರ್ಡ್ ಸಮಿತಿ, ವಾರ್ಡ್ 124
ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ 124